quickmarketreports.com

# ಅಡಿಕೆ ಬೆಳೆಗಾರರ ಸಹಕಾರಿ ಸಂಸ್ಥೆ ಕ್ಯಾಂಪ್ಕೋದ 43ನೇ ಸ್ಥಾಪನಾ ದಿನದ ಕಾರ್ಯಕ್ರಮ

ಸೋಮವಾರ ಅಡಿಕೆ ಬೆಳೆಗಾರರ ಸಹಕಾರಿ ಸಂಸ್ಥೆ ಕ್ಯಾಂಪ್ಕೋದ 43ನೇ ಸ್ಥಾಪನಾ ದಿನದ ಕಾರ್ಯಕ್ರಮವನ್ನು ಮಂಗಳೂರಿನ ಕ್ಯಾಂಪ್ಕೋದ ಕೇಂದ್ರ ಕಚೇರಿಯಲ್ಲಿ ಉದ್ಘಾಟಿಸಿ ಸಂಸದ ನಳಿನ್ ಕುಮಾರ್ ಕಟೀಲ್ ಕ್ಯಾಂಪ್ಕೋ ಅಡಿಕೆ ಬೆಳೆಗಾರರನ್ನು ಉಳಿಸಿದ ಸಂಸ್ಥೆಯಾಗಿದ್ದು ವಾರಣಾಶಿ ಸುಬ್ರಾಯ ಭಟ್ಟರು ಸಹಕಾರಿ ಕ್ಷೇತ್ರದ ದ್ರಷ್ಟಾರರಾಗಿ ಅಂದು ಸ್ಥಾಪಿಸಿದ ಕ್ಯಾಂಪ್ಕೋ ಇಂದು ಅಡಿಕೆ, ಕೊಕ್ಕೋ ಬೆಳೆಗಾರರ ಹಿತರಕ್ಷಕನಾಗಿ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿ ಬೆಳೆದು ನಿಂತು ಕೃಷಿಕರಿಗೆ ಸ್ವಾಭಿಮಾನದ ಬದುಕು ಕಲ್ಪಿಸಿದೆ ಎಂದು ಹೇಳಿದರು. ಇಂದು ಕ್ಯಾಂಪ್ಕೋ 1500 ಕೋಟಿ ರೂಗಳ ವ್ಯವಹಾರ ಹಾಗೂ 3000 ಕ್ಕೂ ಅಧಿಕ ಮಂದಿಗೆ ಉದ್ಯೋಗ ನೀಡಿ ಬೆಳೆದಿದ್ದಾರೆ. ಅದರ ಹಿಂದೆ ರೈತರ ಕಷ್ಟ ನಷ್ಟಗಳಿಗೆ ಎದೆಯೊಡ್ಡಿ ನಿಂತ ಅವರ ಪರಿಶ್ರಮ, ಅದರ ಹಿಂದಿನ ಎಲ್ಲಾ ಮತ್ತು ಇಂದಿನ ಅಧ್ಯಕ್ಷರ ವರೆಗೆ ಹಾಗೂ ಎಲ್ಲಾ ಅಧಿಕಾರಿ, ಸಿಬ್ಬಂದಿ, ಕೃಷಿಕರ ತ್ಯಾಗ ಅಭಿಮಾನದ ಸಂಗತಿ. ಅಡಿಕೆ ಆಮದಿನಿಂದ ಸಮಸ್ಯೆ ಎದುರಾದಾಗ ಹಿಂದಿನ ಅಧ್ಯಕ್ಷ ಎಫ್. ಆರ್ ರಂಗ ಮೂರ್ತಿ ಅವರು ಅಡಿಕೆಬೆಳೆಯುವ 13 ರಾಜ್ಯಗಳ ಜನಪ್ರತಿನಿಧಿಗಳನ್ನು ಒಗ್ಗೂಡಿಸಿ ಕೇಂದ್ರ ಸರಕಾರದ ಮೇಲೆ ಒತ್ತಡ ತಂದಿದ್ದನ್ನು ನೆನಪಿಸಿದ ಅವರು, ಇತರ ಅಧ್ಯಕ್ಷರುಗಳೂ ಇದೇ ರೀತಿ ನಿರಂತರ ರೈತರ ಪರ ಹೋರಾಟ ನಡೆಸಿ ಅಡಿಕೆ ಬೆಳೆಗಾರರ ಹಿತರಕ್ಷಿಸಿದ್ದಾರೆ. ಬೆಲೆ ಕುಸಿತವಾದಾಗ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ನೇತ್ರತ್ವದ ಸರಕಾರ ಮೊದಲ ಬಾರಿಗೆ ಅಡಿಕೆಗೆ ಬೆಂಬಲಬೆಲೆಯನ್ನು ನೀಡಿದ್ದನ್ನು ನೆನಪಿಸಿದರು. ಇಂದು ಅತ್ಯುತ್ತಮ ಗುಣಮಟ್ಟದ ಕ್ಯಾಂಪ್ಕೋ ಚಾಕಲೇಟು ಲಭಿಸುತ್ತಿದ್ದರೆ ಕೃಷಿಕರು ಉದ್ಯಮ ಶೀಲತೆಯನ್ನು ಸಮರ್ಥವಾಗಿ ನಿರ್ವಹಿಸಬಲ್ಲರೆಂಬುದಕ್ಕೆ ಸಾಕ್ಷಿ ಎಂದರು. ಈ ಸಂದರ್ಭ ಅಡಿಕೆಯಿಂದ ನಿರ್ಮಿಸಲಾದ 'ಅರೆಕಾ ಟೀ' ಯ ಮೂಲಕ ಅಡಿಕೆ ಕುರಿತ ಪರಿಕಲ್ಪನೆಯನ್ನೇ ಬದಲಾಯಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಶಿವಮೊಗ್ಗದ ಖ್ಯಾತ ಸಂಶೋಧಕ ನಿವೇದನ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಮಾತನಾಡಿದ ಅವರು ಭಾರತ ಹಾಳಾಗಲು ಗುಟ್ಕಾ ಜಗಿದು ಉಗಿಯುವುದು ಕಾರಣ ಎಂಬ ವಿದೇಶಿ ವಿದ್ಯಾರ್ಥಿಯೊಬ್ಬನ ಮಾತು ನನ್ನಲ್ಲಿ ಛಲವೊಂದನ್ನು ಹುಟ್ಟಿಸಿ 'ಅರೆಕಾ ಟೀ' ಅನಿಷ್ಕಾರಕ್ಕೆ ಮೂಲವಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ವಿರೇಂದ್ರ ಹೆಗ್ಗಡೆ ಹಾಗೂ ಕ್ಯಾಂಪ್ಕೋ, ಕ್ಯಾಮ್ಕೋಸ್ ನಂತಹ ಸಂಸ್ಥೆಗಳ ಸಹಕಾರದಿಂದ ಇದು ಸಾಧ್ಯವಾಗಿದೆ ಎಂದು ಸ್ಮರಿಸಿದರು.

ಕ್ಯಾಂಪ್ಕೋದ ನೂತನ ಚಾಕಲೇಟ್ 'ಟರ್ಬೋ'ವನ್ನು ಸಾಂಸದ ನಳಿನ್ ಕುಮಾರ್ ಕಟೀಲ್ ಲೋಕಾರ್ಪಣೆ ಗೊಳಿಸಿದರೆ, ಕ್ಯಾಂಪ್ಕೋದ ವಿಷನ್ – ಮಿಷನ್ (ದೃಷ್ಟಿ – ಸೃಷ್ಟಿ) ನ್ನು ಮ್ಯಾಮ್ಕೋಸ್‌ನ ಮಾಜಿ ಉಪಾಧ್ಯಕ್ಷ, ಹಿರಿಯ ಸಹಕಾರಿ ನರಸಿಂಹ ನಾಯಕ್ ಬಿಡುಗಡೆಗೊಳಿಸಿ ಶುಭಕೋರಿದರು. ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಕಾರ್ಯಕ್ರದ ಅಧ್ಯಕ್ಷತೆ ವಹಿಸಿದ್ದು, ಕ್ಯಾಂಪ್ಕೋದ ಡಿಜಿಟಲೀಕರಣ, ಕ್ಯಾಂಪ್ಕೋ ಪೆಪ್ಪರ್ (ಕಾಳುಮೆಣಸು) ಕ್ಷೇತ್ರವನ್ನು ಪ್ರವೇಶಿಸುವ ಬಗ್ಗೆ ತಿಳಿಸಿದರು. ಐಡಿಯಲ್ ಐಸ್‌ಕ್ರೀಂ ರಾಷ್ಟ್ರ ಮಟ್ಟದ ಐಸ್‌ಕ್ರೀಂ ಸ್ಪರ್ಧೆಯಲ್ಲಿ ಕ್ಯಾಂಪ್ಕೋ ಚಾಕಲೇಟ್ ಬಳಸಿ ಮೂರು ಪ್ರಶಸ್ತಿಗಳನ್ನು ಪಡೆದುದನ್ನು ತಿಳಿಸಿದರು.

ಕ್ಯಾಂಪ್ಕೋದ ಮಾಜಿ ಎಂ.ಡಿ. ಎ.ಎಸ್ ಭಟ್ ಮತ್ತು ಆರ್ಥಿಕ ತಜ್ಞ ಡಾ। ವಿಘ್ನೇಶ್ವರ ನರ್ಮುಡಿಯವರು ಉಪನ್ಯಾಸ ನೀಡಿದರು. ಉಪಾಧ್ಯಕ್ಷ ಶಂ. ನಾ. ಖಂಡಿಗೆ, ಮ್ಯಾಮ್ಕೋಸ್‌ನ ಉಪಾಧ್ಯಕ್ಷ ಎಡಗೆರೆ ಸುಬ್ರಹ್ಮಣ್ಯ, ಎಂ.ಡಿ. ಸುರೇಶ್ ಭಂಡಾರಿ, ನಿರ್ದೇಶಕರು ಹಾಗೂ ಗಣ್ಯರು ಬೆಳೆಗಾರರು ಉಪಸ್ಥಿತರಿದ್ದರು. ಎಂ. ಡಿ. ಸುರೇಶ್ ಭಂಡಾರಿ ಸ್ವಾಗತಿಸಿ, ಶಂ. ನಾ. ಖಂಡಿಗೆ ವಂದಿಸಿದರು. ಟಿ. ಎಸ್. ಭಟ್ ನಿರ್ವಹಿಸಿದರು.

## ಜ. 16ಕ್ಕೆ ಕ್ಯಾಂಪ್ಕೋ ಬ್ರಾಂಡ್‌ನ ಚಾಕಲೇಟ್ ಕಲ್ಪಕೇಕ್ ಮತ್ತು ಡ್ರಿಂಕಿಂಗ್ ಚಾಕಲೇಟ್ ಬಿಡುಗಡೆ

**ಜು. 16ಕ್ಕೆ ಡಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸಿ. ಪಿ. ಸಿ. ಆರ್. ಐ. ಸಹಯೋಗದಲ್ಲಿ ಕ್ಯಾಂಪ್ಕೋ ಬ್ರಾಂಡ್‌ನ ಚಾಕಲೇಟ್, ಕಲ್ಪಕೇಕ್ ಮತ್ತು ಡ್ರಿಂಕಿಂಗ್ ಚಾಕಲೇಟ್‌ನ್ನು ಬಿಡುಗಡೆಗೊಳಿಸಲಿದ್ದಾರೆ. ನೀರಾ ಶಗುರನ್ನು ಇದಕ್ಕೆ ಬಳಸಿದ್ದು ಇದನ್ನು ಸಕ್ಕರೆ ಕಾಯಿಲೆಯವರೂ ಸೇವನೆ ಮಾಡಬಹುದೆಂದು ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್ ಸತ್ಯಾಶ್ಚಂದ್ರ ಪ್ರಕಟನೆಯಲ್ಲಿ ತಿಳಿಸಿದ್ದಾರೆನ್ನಲಾಗಿದೆ.**